ವಿವರವನ್ನು ಪಡೆದುಕೊಳ್ಳಲೂ ಸಾಧ್ಯವಾಗಲಿಲ್ಲ. ನಿಶ್ಚಿಂತೆಯಿಂದೆಂಬಂತೆ ಇವರ ಮನೆಯಲ್ಲಿ ಉಂಡು ತಿಂದು ಇರತೊಡಗಿದ ಅಜ್ಜಿ ಈ ಗಂಡ ಹೆಂಡತಿಯೆಲ್ಲಿಯಾದರೂ ತನ್ನನ್ನು ಗಮನಿಸುತ್ತಿದ್ದಾರೆ ಎನ್ನಿಸಿದಾಗ ಮಾತ್ರ ಎಲ್ಲಿಲ್ಲದ ಚಿಂತೆಯನ್ನು ಮುಖದ ಮೇಲೆ ಎಳೆದುಕೊಳ್ಳುತ್ತ ಈ ಪ್ರಪಂಚದಲ್ಲಿ ತನಗಿಂತ ದುಃಖಿತರೇ ಇಲ್ಲ ಎನ್ನುವ ರೀತಿಯಲ್ಲಿ ನಡೆದುಕೊಳ್ಳತೊಡಗಿತ್ತು.

ಹಾಗೆಯೇ ತಿಂಗಳೇ ಕಳೆಯಿತು. ಮುದುಕಿ ಈ ಮನೆ ಬಿಟ್ಟು ಹೋಗುವ ಆತುರವನ್ನೇನೂ ತೋರಿಸಲಿಲ್ಲ. ತನ್ನ ಮಕ್ಕಳ ಬಗ್ಗೆ ಮಾತೂ ಇಲ್ಲ. ಈಗೀಗ ಗಂಡ ಹೆಂಡತಿಯರಿಬ್ಬರಿಗೂ ಆಶ್ಚರ್ಯವಾಗಹತ್ತಿತು. ಜೊತೆಗೇ ವಾರವೆರಡು ವಾರಗಳ ಮಟ್ಟಿಗೆ ಇರಬಹುದೆಂದು ಎಣಿಸಿ ಬಿಟ್ಟುಕೊಂಡ ಆಕೆ ತಿಂಗಳೇ ಕಳೆದರೂ ಅಲುಗಾಡುವ ಮನಸ್ಸು ಮಾಡದಿದ್ದುದು ಇಬ್ಬರಿಗೂ ರಗಳೆಯಿನಿಸತೊಡಗಿತು. ಎಷ್ಟೇ ಔದಾರ್ಯವಂತರಾದರೂ ಸಂಬಂಧವೇ ಇಲ್ಲದ ಒಬ್ಬಳನ್ನು ಎಷ್ಟು ದಿನ ಹಾಗೆ ಇಟ್ಟುಕೊಳ್ಳಲು ಬಂದೀತು. ತುಸುವಾದರೂ ಕೆಲಸ ಮಾಡುವವಳಾಗಿದ್ದರೆ ಕೆಲಸದವರೇ ಇಲ್ಲದ ಆ ಮನೆಯಲ್ಲಿ ಸ್ವಲ್ಪ ಸಹಾಯವಾದರೂ ಆಗುತ್ತಿತ್ತೇನೋ. ಅದೂ ಇಲ್ಲ. ವಯಸ್ಸಾಗಿದ್ದರೂ ಗಟ್ಟಿ ಮುಟ್ಟಾಗಿದ್ದು ಇಬ್ಬರ ಪಾಲಿನ ಊಟವನ್ನು ಒಬ್ಬಳೇ ಮಾಡುವ ಬಯಕೆ ಮತ್ತು ತಾಕತ್ತು ಎರಡೂ ಇದ್ದು ಅದನ್ನು ಪ್ರಶಸ್ತವಾಗಿ ಉಪಯೋಗಿಸಿಕೊಳ್ಳುತ್ತಿದ್ದ ಮುದುಕಿ ಈಚಿನ ಕಡ್ಡಿಯೆತ್ತಿ ಆಚೆ ಇಡಲಿಕ್ಕೂ ಮುಂದಾಗಲಿಲ್ಲ.

ಬೇಸತ್ತ ಶಾಂತಾರಾಮ ಒಂದು ರಾತ್ರಿ ಮಲಗುವ ಮುನ್ನ, 'ಅಲ್ಲ ಆರು ತಿಂಗಳಿನಿಂದ ಹುಡುಕುತ್ತಿದ್ದೇನೆ. ನಿನ್ನ ಮಗನ ಮನೆ ಸಿಗುತ್ತಲೇ ಇಲ್ಲ. ಅವನ ಬಗ್ಗೆ ಬೇರೆ ಯಾವುದೇ ವಿವರಗಳೂ ಇಲ್ಲ. ಏನು ಮಾಡಲಿ ಹೇಳು. ನಿನ್ನ ಕಿರೀ ಮಗನ ಮನೆಗೇ ತಿರುಗಿ ಹೋಗಿ ಬಿಡು. ಬಸ್ಸು ಹತ್ತಿಸಿ ಬಿಡುತ್ತೇನೆ ಎಂದು ಅಜ್ಜಿಗೆ ಈಗಲೇ ಹೇಳಿ ಬರುತ್ತೇನೆ' ಎಂದು ಹೊರಟವನನ್ನು ಹೆಂಡತಿ ತಡೆದಿದ್ದಳು. 'ಪಾಪ ವಯಸ್ಸಾದ ಅಜ್ಜಿ. ನಾವು ಹೊರಗೆ ಹಾಕಿದರೆ ಇನ್ನೆಲ್ಲಿಯೋ ಹೀಗೇ ಅನಾಥಳಂತೆ ಬಿದ್ದಿರುತ್ತಾಳಷ್ಟೆ. ಇನ್ನೂ ಸ್ವಲ್ಪ ದಿನ ನೋಡೋಣ.' ಅವಳ ಮಾತು ಕೇಳಿ ಶಾಂತಾರಾಮ ಸುಮ್ಮನಾಗಿದ್ದ. ತಮ್ಮ ಮಾತುಕತೆಗಳನ್ನು ಅಜ್ಜಿ ಕೇಳಿಸಿಕೊಂಡಿರಬಹುದೆನ್ನುವ ಸಂಶಯವೂ ಬರಲಿಲ್ಲ ಗಂಡ ಹೆಂಡರಿಗೆ. ಅಥವಾ 'ಕೇಳಿಸಿಕೊಂಡರೂ ಏನೀಗ' ಎನ್ನುವ ಭಂಡತನವೂ ಇದ್ದೀತು. ಹಾಗೆಯೇ ಮಲಗಲು ಹೋಗಿದ್ದರು.

★★★

